ಮಾಡತಕ್ಕದ್ದಲ್ಲ. ಅಂಥ ಎಲ್ಲ ಭೂಮಿಗಳನ್ನು ಬೆಳೆಯುತ್ತಿರುವ ನಗರ ಅಥವಾ ಪಟ್ಟಣಗಳ ಸಾರ್ವಜನಿಕ ಅಗತ್ಯತೆಗಳಿಗೆ ಒದಗಿಸಲು ಸಾರ್ವಜನಿಕ ಅಥವಾ ಸರ್ಕಾರಿ ಉದ್ದೇಶಗಳಿಗಾಗಿ ಮೀಸಲಿಡತಕ್ಕದ್ದು ಎಂದು ತಿಳಿಸಲಾಗಿದೆ. ಆದ್ದರಿಂದ ಈ ಪಟ್ಟಣ/ನಗರ ಮಿತಿಯಲ್ಲಿನ ಜಮೀನುಗಳು ಮಂಜೂರಾತಿಸಲು ಅವಕಾಶವಿಲ್ಲದಿರುವುದರಿಂದ, ಇಂಥಹ ಜಮೀನುಗಳನ್ನು ಸ್ಕ್ರಮಗೊಳಿಸುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ.

402 (646) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕಛೇರಿ ಭೂಮಿ/ಕಿಯಾಸ್ಕ್ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈವರೆಗೂ ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಇಲ್ಲ.

ಆ) ಭೂಮಿ ಕೇಂದ್ರವು ನಿರ್ದಿಷ್ಟ ಸಿಬ್ಬಂಧಿ ವಿನ್ಯಾಸ ಹೊಂದಿರುವುದಿಲ್ಲ. ಭೂಮಿ ಕೆಲಸ ಕಾರ್ಯಗಳಿಗೆ ಸಿಬ್ಬಂದಿಯ ಕೊರತೆ ಕಂಡುಬಂದಿರುವುದಿಲ್ಲ. ಹೆಚ್ಚುವರಿ ಸಿಬ್ಬಂದಿಯ ಅವಶ್ಯಕತೆ ಕಂಡುಬಂದಲ್ಲಿ, ತಾಲ್ಲೂಕು/ಜಿಲ್ಲಾ ಆಡಳಿತವು ಭೂಮಿ ಕೇಂದ್ರಗಳಿಗೆ ನಿಯೋಜಿಸಲು ಸಿಬ್ಬಂದಿಯನ್ನು ಗುರುತಿಸಿದಲ್ಲಿ, ಈ ಸಿಬ್ಬಂದಿಗೆ ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯು ತರಬೇತಿ ನೀಡುತ್ತದೆ.

403 (649) ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿ ಕೈಗಾರಿಕೆ ತಡೆಗಟ್ಟಲು ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು :

ಆ) ಅಕ್ರಮ ಗಣಿಗಾರಿಕೆಯ ಪ್ರಕರಣಗಳ ವಿವರ ನೀಡುವುದು;

ಇ) ಅಕ್ರಮ ಗಣಿಗಾರಿಕೆದಾರರ ವಿಳಾಸ ಮತ್ತು ಅವರುಗಳಿಂದ ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು? (ಕಳೆದ ಮೂರು ವರ್ಷಗಳ ವರ್ಷವಾರು ವಿವರ ನೀಡುವುದು)

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ತುಮಕೂರು ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಗಣಿ ಮಾಲೀಕರ ಸಮಕ್ಷಮ ಜಂಟಿ ಸರ್ವೆ ನಡೆಸಿದ್ದು ಈ ಜಂಟಿ ಸರ್ವೆಯ ನಂತರ ಅರಣ್ಯ ಇಲಾಖಾ ಸಿಬ್ಬಂದಿಯವರು ಕಾಂಕ್ರೀಟ್ ಕಂಬಗಳನ್ನು ನೆಟ್ಟಿ ಅರಣ್ಯ ಗಡಿಯನ್ನು ಗುರುತಿಸಿಕೊಂಡು